WPP No. SK/UDP/01. D.O.P - 15th of every month from Udupi HPO
ಬೆಲೆ ರೂ.2.50

**ಹೆಬ್ಬಾರ್ ಎಂಟರ್‌ಪ್ರೈಸಸ್**
ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101.
*ಶುಭ ಸಮಾರಂಭಗಳಿಗೆ ಬೇಕಾಗುವ ಕ್ಯಾಟರಿಂಗ್ ವ್ಯವಸ್ಥೆ, ಶಾಮಿಯಾನ, ಗ್ಯಾಸ್ ಸ್ಟವ್, ಟೇಬಲ್, ಕುರ್ಚಿ, ಪಾತ್ರೆಗಳು ಹಾಗೂ ಇನ್ನಿತರ ಎಲ್ಲಾ ವ್ಯವಸ್ಥೆಗಳನ್ನೂ ಸಕಾಲದಲ್ಲಿ ಒದಗಿಸಲಾಗುವುದು.*
ಫೋನ್ : 2531493 (O), 2530851 (R), ಮೊಬೈಲ್ : 94484 37893

# ಶ್ರೀ ಶಾರದಾ

ಮಾಸಪತ್ರಿಕೆ - 15ನೇ ಮಾರ್ಚ್ 2008

॥ ಧಿಯೋ ಯೋನಃ ಪ್ರಚೋದಯಾತ್ ॥

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ - 576 102. ☎ 2520754

ಸಂಪುಟ-8 ಸಂಚಿಕೆ-3 ಪುಟಗಳು-8 Registered Under No.KA/SK/UDP/1260/2006-2008 Dated from 01-01-2006 to 31-12-2008.



ಶೃಂಗೇರಿ ಜಗದ್ಗುರು ಶ್ರೀ ಶ್ರೀ ಭಾರತೀ ತೀರ್ಥ ಮಹಾಸ್ವಾಮಿಗಳವರು ಮಂಗಳೂರು ಶ್ರೀ ಸುಬ್ರಹ್ಮಣ್ಯ ಶತಮಾನೋತ್ಸವದ ವಿಶೇಷ ಕಾರ್ಯಕ್ರಮಗಳಲ್ಲಿ ಭಾಗ ವಹಿಸಲು ದ.ಕ.ಜಿಲ್ಲೆಯ ಮಂಗಳೂರಿಗೆ ಆಗಮಿಸಲಿರುವರು.

ಆ ಪ್ರಯುಕ್ತ ಮೇ 10, 11, 12 ಹಾಗೂ 13ರಂದು ನಡೆಯಲಿರುವ ವಿವಿಧ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳ ವಿವರಗಳನ್ನು 5ನೇ ಪುಟದಲ್ಲಿ ನೀಡಲಾಗಿದೆ.

## ನಿಶ್ಚಿತ ಗುರಿ ಇದ್ದಾಗ ಯಶಸ್ಸು ಸಾಧ್ಯ : ವಿದ್ಯಾಸಾಗರ ತೀರ್ಥರು

ಜೀವನದಲ್ಲಿ ಯಶಸ್ವಿಯಾಗಲು ವಿದ್ಯೆಯೊಂದಿಗೆ ಶ್ರದ್ಧೆ ಹಾಗೂ ಗುರಿ ಇರಬೇಕು ಎಂದು ಉಡುಪಿಯ ಕೃಷ್ಣಾಪುರ ಮಠದ ಶ್ರೀ ವಿದ್ಯಾಸಾಗರತೀರ್ಥ ಸ್ವಾಮೀಜಿ ಹೇಳಿದರು. ಅವರು ಮಲ್ಲಮಾರು ಶ್ಯಾನುಭೋಗ ಕುಟುಂಬಸ್ಥರ ಮೂಲ ನಾಗಬನದಲ್ಲಿ ನಡೆದ ನೂತನ ಶಿಲಾಬಿಂಬ ಪ್ರತಿಷ್ಠಾಕಲಶ ಹಾಗೂ ಅಷ್ಟಪವಿತ್ರ ನಾಗಮಂಡಲೋತ್ಸವದ ಸಂದರ್ಭದಲ್ಲಿ ನಡೆದ ಧಾರ್ಮಿಕ ಸಭೆಯಲ್ಲಿ ಆಶೀರ್ವಚನಗೈದರು.

ಮಂಗಳೂರು ವಿಮಾನ ನಿಲ್ದಾಣದ ನಿರ್ದೇಶಕ ಎಂ.ಆರ್.ವಾಸುದೇವ ಅಧ್ಯಕ್ಷತೆ ವಹಿಸಿದ್ದರು. ಕ.ಸಾ.ಪರಿಷತ್‌ನ ಮಾಜಿ ಅಧ್ಯಕ್ಷ ಹರಿಕೃಷ್ಣ ಪುನರೂರು, ಎನ್‌ಐಟಿಕೆಯ ನಿವೃತ್ತ ಡೀನ್ ಪ್ರೊ। ಬಿ.ಆರ್. ಸಾಮಗ






ಮಾತನಾಡಿದರು. ನಾಗಪಾತ್ರಿ ಕಕ್ಕುಂಜೆ ನಾಗಾನಂದ ವಾಸುದೇವ ಆಚಾರ್ಯ, ಗೌರವಾಧ್ಯಕ್ಷ ಭವಾನಿ ಶಂಕರರಾವ್, ಎಚ್.ಬಾಲಕೃಷ್ಣ ಭಟ್ ಹಳೆಯಂಗಡಿ, ವೆಂಕಟ್ರಾವ್ ಪಂಜ, ಯೋಗೀಶ್ ರಾವ್ ಏಳಿಂಜೆ, ಎಸ್.ವೆಂಕಟ್ರಮಣ ಮಯ್ಯ ತಡಂಬೈಲ್, ಚಂದ್ರಪ್ಪ ಗುರಿಕಾರ ಮತ್ತಿತರರು ಉಪಸ್ಥಿತರಿದ್ದರು.

(3ನೇ ಪುಟಕ್ಕೆ ...)

## ಶ್ರೀಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)
## ವಿಶೇಷ ಸರ್ವಸದಸ್ಯರ ಸಭೆಯಲ್ಲಿ ಶೇ.10 ಪಾಲುಮುನಾಫೆ ಘೋಷಣೆ

ಶ್ರೀಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಯ ವಿಶೇಷ ಸರ್ವಸದಸ್ಯರ ಸಭೆಯು ತಾ.23-02-2008ರಂದು ನಡೆಯಿತು. 2006-07ನೇ ಸಾಲಿನ ಲೆಕ್ಕಪರಿಶೋಧಕರ ವರದಿಯನ್ನು ಅಂಗೀಕರಿಸಿ ನಿವ್ವಳ ಲಾಭವನ್ನು ವಿಂಗಡಿಸುವರೇ ಈ ವಿಶೇಷ ಸರ್ವಸದಸ್ಯರ ಸಭೆಯನ್ನು ಏರ್ಪಡಿಸಲಾಗಿತ್ತು.

ಆರಂಭದಲ್ಲಿ ಶ್ರೀಮತಿ ಸುನೀತಾ ಪ್ರಸಾದ್ ದೇವತಾ ಪ್ರಾರ್ಥನೆ ಮಾಡಿದರು. ನಂತರ ಸದಸ್ಯ ಬಾಂಧವರನ್ನು ಆತ್ಮೀಯವಾಗಿ ಸ್ವಾಗತಿಸಿದ ಸೊಸೈಟಿಯ ಅಧ್ಯಕ್ಷರಾದ ಶ್ರೀ ಎಮ್. ಸದಾನಂದ ರಾಯರು ಸದಸ್ಯರ ಸಹಕಾರ, ಗ್ರಾಹಕರು ಮತ್ತು ಸಿಬ್ಬಂದಿ ವರ್ಗದ ವಿಶ್ವಸನೀಯ ಸಂಬಂಧದಿಂದ ಸೊಸೈಟಿ ನಿರಂತರ 4 ವರ್ಷಗಳಿಂದ ಲಾಭ ಗಳಿಸಿಕೊಂಡು ಬರುತ್ತಿದೆ. ವರ್ಷದ 2005-06ರಲ್ಲಿ ರೂ.2.11 ಲಕ್ಷ ಲಾಭ ಗಳಿಸಿದ್ದ ಸಂಸ್ಥೆಯು 2006-07ರಲ್ಲಿ ರೂ.2.36 ಲಕ್ಷ ನಿವ್ವಳ ಲಾಭಗಳಿಸಿದೆ. ಲೆಕ್ಕ ಪರಿಶೋಧಕರ ವರದಿ ಸಾಗೂ ನಿವ್ವಳ ಲಾಭದ ವಿಂಗಡಣೆಯ ಪ್ರಸ್ತಾಪವನ್ನು ಸಭೆಯ ಮುಂದೆ ಇಡುತ್ತಿದ್ದೇವೆ. ಸೊಸೈಟಿಯ ಹೆಚ್ಚಿನ ಬೆಳವಣಿಗೆಗೆ ಸದಸ್ಯ ಬಾಂಧವರ ನಿರಂತರ ಸಹಕಾರ ಅಗತ್ಯ. ಪಾಲು ಬಂಡವಾಳದಲ್ಲಿ ಹೆಚ್ಚಿನ ಹಣ ತೊಡಗಿಸಿ ಸೊಸೈಟಿಯ ಒಟ್ಟು ವ್ಯವಹಾರದಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವಂತೆ ಅವರು ಸದಸ್ಯರಿಗೆ ವಿನಂತಿ ಮಾಡಿದರು. ಮಂಡಿಸಲ್ಪಟ್ಟ ಲೆಕ್ಕಪರಿಶೋಧಕರ ವರದಿಯನ್ನು ಸರ್ವಾನುಮತದಿಂದ ಅಂಗೀಕರಿಸಿದ ಸಭೆಯು ಆಡಳಿತ ಮಂಡಳಿಯು ಮುಂದಿಟ್ಟ ಲಾಭ ವಿಂಗಡಣೆಯ ಪ್ರಸ್ತಾಪವನ್ನು ಅನುಮೋದಿಸಿತು. ಅದರಂತೆ ಸೊಸೈಟಿಯ ಪ್ರಾಥಮಿಕ ಸದಸ್ಯರಿಗೆ ಶೇ.10 ಡಿವಿಡೆಂಡ್ ಘೋಷಿಸಿಲಾಯಿತು. ಸೊಸೈಟಿಯ ಉಪಾಧ್ಯಕ್ಷ ಶ್ರೀ ಸಿ.ಎಸ್.ರಾವ್ ಹಾಗೂ ಇತರ ಆಡಳಿತ ಮಂಡಳಿಯ ಸದಸ್ಯರು ಸಭೆಯಲ್ಲಿ ಉಪಸ್ಥಿತರಿದ್ದರು. ಕೊನೆಯಲ್ಲಿ ನಿರ್ದೇಶಕ ಶ್ರೀ ವೈ. ಮೋಹನರಾಯರು ಕೃತಜ್ಞತೆ ಸಲ್ಲಿಸಿದರು. ಕಾರ್ಯದರ್ಶಿ ಕೆ. ವೇಣುಗೋಪಾಲರಾವ್ ಕಾರ್ಯಕ್ರಮ ನಿರ್ವಹಿಸಿದರು.

## ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ)

**ಕುಂಜಿಬೆಟ್ಟು, ಉಡುಪಿ - 2.**

### ಶ್ರೀ ಶಾರದಾ ದೇವಸ್ಥಾನದಲ್ಲಿ

**ತಾ.07-05-2008ರಂದು ಬುಧವಾರ ಅಕ್ಷಯ ತೃತೀಯಾ ಶುಭದಿನದಂದು ಸಂಘದ ಆಶ್ರಯದಲ್ಲಿ**

## ಸಾಮೂಹಿಕ ಉಪನಯನ

ಕಾರ್ಯಕ್ರಮವು ಜರಗಲಿರುವುದು.
ಆಸಕ್ತ ಸಮಾಜ ಬಾಂಧವರು ಇದರಲ್ಲಿ ಪಾಲ್ಗೊಳ್ಳಲಿರುವ ವಟುಗಳ ವಿವರಗಳನ್ನು ತಾ.30-04-2008ರ ಒಳಗೆ ಶ್ರೀಶಾರದಾ ಮಂಟಪದ ಮೆನೇಜರ್ (ಫೋನ್ : 2520754)ರಿಗೆ ತಿಳಿಸಲು ಕೋರಲಾಗಿದೆ.

**- ಕಾರ್ಯದರ್ಶಿ**



## ಶ್ರೀಶಾರದಾ ದೇವಸ್ಥಾನ

**ಶ್ರೀಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ - 2.**
**ಫೋನ್ : 2520754**

ಪ್ರಿಯರೇ, ತಾ.08-03-2007

ಸ್ವಸ್ತಿ ಶ್ರೀ ಸರ್ವಜಿತ್ ನಾಮ ಸಂ।ರದ ಮೀನ ಮಾಸ ದಿನ ೩೦ ಸಲುವ ಚೈತ್ರ ಶುದ್ಧ ನವಮಿ ತಾ.13-04-2008ನೇ ಆದಿತ್ಯವಾರ ಸಂಜೆ

**ಕಿರು ನವರಾತ್ರಿಯ ಶುಭ ಸಮಯದಲ್ಲಿ**
**ಪರಿಸರದ ಭಕ್ತಾಭಿಮಾನಿಗಳು ಭಕ್ತಿ-ಪ್ರೀತಿಯಿಂದ ಪೂಜಿಸಿಕೊಂಡು ಬರುತ್ತಿರುವ**
**ಶ್ರೀಶಾರದಾ ಪರಮೇಶ್ವರೀ ದೇವರ ಸನ್ನಿಧಿಯಲ್ಲಿ**

## ಸಾಮೂಹಿಕ ಶ್ರೀದುರ್ಗಾ ನಮಸ್ಕಾರ ಪೂಜೆಯು

ನೆರವೇರಲಿದೆ.

ಪಾಲ್ಗೊಳ್ಳಲಿರುವ ಭಕ್ತಾದಿಗಳು ಶ್ರೀಶಾರದಾ ಮಂಟಪದ ಮೆನೇಜರ್‌ರವರಲ್ಲಿ ರೂ.125/-ನ್ನು ಸಲ್ಲಿಸಿ ತಮ್ಮ ಪೂಜೆಯನ್ನು ನೋಂದಾಯಿಸಿಕೊಳ್ಳಬೇಕಾಗಿ ವಿನಂತಿ. ದುರ್ಗಾಮಾತೆಗೆ ಅರ್ಪಿಸಲು ಹಣ್ಣು, ಹೂವು ಇತ್ಯಾದಿಗಳನ್ನು ಪೂಜಾರಂಭಕ್ಕೆ ಮೊದಲು ತಂದು ನೀಡಬಹುದು. ಪೂಜೆಗೆ ಬರುವಾಗ ಹರಿವಾಣ, ಉದ್ಧರಣೆ ತರಬೇಕಾಗಿ ವಿನಂತಿ.

**- ಆಡಳಿತ ಮಂಡಳಿ**

**ಕಾರ್ಯಕ್ರಮ**

ಅಪರಾಹ್ನ 3 ರಿಂದ : ದೀಪವಿಟ್ಟು ಮಂಡಲ ರಚನೆ, ಭಕ್ತರು ಹಾಗೂ ಋತ್ವಿಜರಿಂದ ಸಪ್ತಶತೀ ಪಾರಾಯಣ

ಸಂಜೆ 5 ರಿಂದ : ಶ್ರೀಶಾರದಾ ದೇವಸ್ಥಾನದಲ್ಲಿ ಸಾಮೂಹಿಕ ಪ್ರಾರ್ಥನೆ, ಸೇವಾಕರ್ತೃಗಳಿಂದ ಪೂಜಾ ಸಂಕಲ್ಪ, ಸಹಸ್ರನಾಮ ಪಾರಾಯಣ, ಅಷ್ಟೋತ್ತರ ಕುಂಕುಮಾರ್ಚನೆ, ಪುಷ್ಪಾಂಜಲಿ ನಮಸ್ಕಾರ,

: ಮಹಾಪೂಜೆ, ತೀರ್ಥಪ್ರಸಾದ ವಿತರಣೆ, ಭೋಜನ ಪ್ರಸಾದ.